**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**

**ಸಿ.ಸಿ.ನಂ. 2207/2023**

**ದಿನಾಂಕಃ 20.02.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು ಃ | ಕವಿತ | ಚಾಸಾ-2, ಪ್ರಾಸ.-2 |
| ಗಂಡನ ಹೆಸರು ಃ | ಮಲ್ಲಿಕಾರ್ಜುನ | |
| ವಯಸ್ಸು ಃ | 40 ವರ್ಷ | |
| ಉದ್ಯೋಗ ಃ | ವ್ಯವಸಾಯ | |
| ವಾಸ ಃ | ದಾಸರಹಳ್ಳಿ | |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಚಾಸಾ-1 ಮತ್ತು 3 ನನ್ನ ಮೈದುನ. ಚಾಸಾ-4 ನನ್ನ ಮಾವ. ಚಾಸಾ-5 ನನ್ನ ಗಂಡ. ಚಾಸಾ-6 ಮತ್ತು 7 ನನ್ನ ಸಂಬಂಧಿಕರು. ಆರೋಪಿತರು ಗೊತ್ತು, ಅವರು ನನ್ನ ಸಂಬಂಧಿಕರು. ಸುಮಾರು 2 ವರ್ಷಗಳ ಹಿಂದೆ ದಿಃ 17-12 ರಂದು ನಾನು ನನ್ನ ಮನೆ ಹತ್ತಿರ ಇದ್ದಾಗ ಚಾಸಾ-1 ರವರು ಅವರ ಮನೆಯ ನೀರಿನ ತೊಟ್ಟಿಯ ಹತ್ತಿರ ಜಮೀನಿನ ವಿಚಾರವಾಗಿ ಚಾಸಾ-5, 6 ರವರ ಜೊತೆ ಮಾತನಾಡುತ್ತಾ ನಿಂತಿದ್ದಾಗ 1 ರಿಂದ 3 ನೇ ಆರೋಪಿತರು ಏಕಾಏಕಿ ಬಂದಾಗ ನಾನು ಅಲ್ಲಿಗೆ ಹೋಗಿರುತ್ತೇನೆ. 3 ನೇ ಆರೋಪಿ ಅವ್ಯಾಚ್ಯ ಶಬ್ದಗಳಿಂದ ಬೈದಿರುತ್ತಾರೆ. 2 ನೇ ಆರೋಪಿ ನನ್ನ ಎದೆಗೆ, ಮೂಗಿಗೆ ಹೊಡೆದಿರುತ್ತಾರೆ. 1 ಮತ್ತು 3 ನೇ ಆರೋಪಿತರು ಅವ್ಯಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಬೇರೆ ಯಾರು ಯಾರಿಗೆ ಹೊಡೆದಿರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ. ಚಾಸಾ-3 ಮತ್ತು 4 ರವರಿಗೆ ಆರೋಪಿತರು ಹೊಡೆದಿರುವ ವಿಚಾರ ನನಗೆ ತಿಳಿಯಿತು. 2 ನೇ ಆರೋಪಿ ನೀನು ಯಾವಾಳೆ ಕೇಳಲು ಎಂದು ನನ್ನ ಎದೆಗೆ ಹೊಡೆದಿರುತ್ತಾಳೆ. ನಂತರ ನಾನು, ಚಾಸಾ-3 ಮತ್ತು 4 ರವರು ಬೀರೂರು ಸರ್ಕಾರಿ ಅಸ್ಪತ್ರೆಗೆ ಹೋಗಿ ದಾಖಲಾಗಿರುತ್ತೇವೆ, ನಂತರ ಚಾಸಾ-3 ರವರನ್ನು ಶಿವಮೊಗ್ಗದ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುತ್ತಾರೆ. ಘಟನೆ ಬಗ್ಗೆ ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ. ಘಟನೆ ಬಗ್ಗೆ ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿರುತ್ತೇನೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ( ಆರೋಪಿತರು ಈ ದಿನ ಗೈರುಹಾಜರಾಗಿದ್ದು ಆರೋಪಿತರ ಗುರುತಿಸುವಿಕೆ ಬಗ್ಗೆ ತಕರಾರು ಇಲ್ಲಾ ಎಂದು ಆರೋಪಿತರ ಪರ ವಕೀಲರು ಹೇಳಿರುತ್ತಾರೆ ) ಸಾಕ್ಷಿಯು ಕಲಂ 164(5) ರಡಿ ದಾಖಲಿಸಿದ ಹೇಳಿಕೆಯನ್ನು ನೋಡಿ ಒಪ್ಪಿಕೊಂಡ ಮೇರೆಗೆ ಅದನ್ನು ನಿಪಿ-4 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೊಜನೆಯ ಪ್ರಕರಣಕ್ಕೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು)**

**<u>ಪಾಟೀಸವಾಲುಃ ಮಾನ್ಯ ಸಸಅ. ರವರಿಂದ ಃ</u>**

ದಿಃ 17.12.2022 ರಂದು ಜಮೀನಿನ ವಿಚಾರವಾಗಿ ಚಾಸಾ-3, 4, 6, 7 ರವರು ಮಾತನಾಡುತ್ತಿರುವಾಗ ಆರೋಪಿತರು ಏಕಾಏಕಿ ಬಂದು ಅವ್ಯಾಚ್ಯ ಶಬ್ದಗಳಿಂದ ನಿಂಧಿಸಿ ಚಾಸಾ-3 ರವರಿಗೆ ಮೂಗಿಗೆ, ಸೊಂಟದ ಕೆಳಗೆ ಕಾಲಿನಿಂದ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿ. ಜಗಳ ಬಿಡಿಸಲು ಬಂದ ಚಾಸಾ-4 ರವರಿಗೂ ಸಹ ಆರೋಪಿತರು ಕೈಯಿಂದ ಹೊಡೆದು ಸೊಂಟಕ್ಕೆ ಕಾಲಿನಿಂದ ತುಳಿದರು ಎಂದರೆ ಸರಿ. ಜಗಳವನ್ನು ಬಿಡಿಸಲು ಹೋದ ನನಗೂ ಸಹ 1 ಮತ್ತು 2 ನೇ ಆರೋಪಿತರು ಹಲ್ಲೆ ಮಾಡಿರುತ್ತಾರೆ ಎಂದರೆ ಸರಿ. ಚಾಸಾ-3 ರವರು ನನಗೆ ಅವ್ಯಾಚ್ಯ ಶಬ್ದಗಳಿಂದ ಬೈದು ಕೈಯಿಂದ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿ. ನಂತರ ನಾನು ಮತ್ತು ಚಾಸಾ-3, 4 ರವರು ಬೀರೂರು ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇವೆ ಎಂದರೆ ಸರಿ. ಚಾಸಾ-1 ರವರು ಘಟನೆ ಬಗ್ಗೆ ಠಾಣೆಗೆ ದೂರು ನೀಡಿರುತ್ತಾರೆ ಎಂದರೆ ಸರಿ.

**<u>ಪಾಟೀಸವಾಲುಃ ಶ್ರೀ ಎಲ್ ಇ ಆರೋಪಿ ಪರ ವಕೀಲರಿಂದಃ</u>**

ಚಾಸಾ-1 ರವರ ಮನೆಯ ನೀರಿನ ತೊಟ್ಟಿಗೂ ನಮ್ಮ ಮನೆಗೂ ಸ್ವಲ್ಪ ದೂರ ಅಂತರ ಇರುತ್ತದೆ. ಗಲಾಟೆ ನಡೆಯುತ್ತಿದ್ದ ಸಮಯ ಸುಮಾರು 20-25 ಜನ ಇದ್ದರು ಎಂದರೆ ಸಾಕ್ಷಿಯು ನಾನು ಮನೆಯಲ್ಲಿದ್ದ ಕಾರಣ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಘಟನಾ ಸ್ಥಳಕ್ಕೆ ನಾನು ಹೋದಾಗ ಅಂದಾಜು 15-20 ಜನ ಸೇರಿದ್ದರು. ಅಲ್ಲಿ 15-20 ಜನ ಸೇರಿದ್ದ ಕಾರಣ ಮತ್ತು ನಾನು ಮನೆಯಲ್ಲಿದ್ದ ಕಾರಣ ಯಾರು ಯಾರಿಗೆ ಹೊಡೆದಿರುತ್ತಾರೆ ಎಂದು ನನಗೆ ಹೇಳಲಾಗುವುದಿಲ್ಲ ಎಂದರೆ ಸರಿ. ನಾನು ಘಟನೆ ಸ್ಥಳಕ್ಕೆ ಹೋದಾಗ ಅಲ್ಲಿದ್ದ ಸಾರ್ವಜನಿಕರು ಜಗಳವನ್ನು ಬಿಡಿಸಿದ್ದರು ಎಂದರೆ ಸರಿಯಲ್ಲ. ಯಾರು ಯಾರಿಗೆ ಹೊಡೆದಿರುತ್ತಾರೆ ಎಂದು ನನಗೆ ತಿಳಿದಿಲ್ಲ ಎಂದರೆ ಸಾಕ್ಷಿಯು 2 ನೇ ಆರೋಪಿ ನನ್ನ ಎದೆಗೆ ಹೊಡೆದಿರುತ್ತಾನೆ, 3 ನೇ ಆರೋಪಿ ನನಗೆ ಅವ್ಯಾಚ್ಯ ಶಬ್ದಗಳಿಂದ ಬೈದಿರುತ್ತಾನೆ. ಗಲಾಟೆಯ ಬಗ್ಗೆ ನಾನು ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ. ಘಟನೆಯ ನಂತರ ನಾನು ಪೋಲಿಸ್ ಠಾಣೆಗೆ ಹೋಗಿರುವುದಿಲ್ಲ ನಾನು ಆಸ್ಪತ್ರೆಯಲ್ಲಿದ್ದೆ. ಊರಿಗೆ ಬಂದು ಪೋಲಿಸರು ನನ್ನ ಹೇಳಿಕೆ ಪಡೆದಿಲ್ಲ. ನಾನು ಪೋಲಿಸ್ ಠಾಣೆಗೆ ದಿಃ 27.12.2022 ರಂದು ಹೋಗಿದ್ದು ಅಲ್ಲಿಂದ ನನ್ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ. ನನ್ನ ಹೇಳಿಕೆಯನ್ನು ಪೋಲಿಸರು ಯಾವಾಗ ಪಡೆದಿರುತ್ತಾರೆ ಎಂದು ನನಗೆ ನೆನಪಿಲ್ಲ. ಪೋಲಿಸ್ ಠಾಣೆಗೆ ನಾನು ಒಟ್ಟು 2 ಬಾರಿ ಹೋಗಿರುತ್ತೇನೆ. ನನಗೆ ಓದು ಬರಹ ಬರುವುದಿಲ್ಲ. ನನ್ನ ಹೇಳಿಕೆಯನ್ನು ಪೋಲಿಸರು ನನಗೆ ಓದಿ ಹೇಳಿರುವುದಿಲ್ಲ ಎಂದರೆ ಸರಿ.

ನನ್ನ ಕಲಂ 164(5) ರ ಹೇಳಿಕೆಯಲ್ಲಿ ವಾಸು ಎಂಬುವವನು ನನ್ನ ಎದೆಗೆ ಮುಖಕ್ಕೆ ಹೊಡೆದಿರುತ್ತಾನೆ ಎಂದು ಹೇಳಿರುತ್ತೇನೆ ಎಂದರೆ ಸರಿ. ನನ್ನ ಬಟ್ಟೆ ಹರಿದಿರುವುದಿಲ್ಲ. ನನ್ನ ತಾಳಿ ಸರ ಹರಿದಿತ್ತು. ಈ ಸಂಬಂಧ ನಾನು ಹೇಳಿಕೆ ನೀಡಿರುವುದಿಲ್ಲ. ಪೋಲಿಸರು ನ್ಯಾಯಾಧೀಶರ ಮುಂದೆ ಇದೇ ರೀತಿ ಹೇಳಿಕೆ ನೀಡಿ ಎಂದು ಹೇಳಿರುವುದಿಲ್ಲ. ನಾನು ನ್ಯಾಯಾಧೀಶರ ಮುಂದೆ ನೀಡಿದ ಹೇಳಿಕೆಯಲ್ಲಿ

ವಾಸು ಎಂಬ ವ್ಯಕ್ತಿ ನನ್ನ ತಾಳಿ ಸರ ಹರಿದಿರುತ್ತಾನೆ ಎಂದು ಹೇಳಿರುತ್ತೇನೆ ಎಂದರೆ ಸರಿ. ಯಾವುದೇ ಘಟನೆ ನಡೆಯದಿದ್ದರೂ ಸಹ ನಾನು ಮತ್ತು ಚಾಸಾ-1, 3 ರಿಂದ 9 ರವರು ಸೇರಿಕೊಂಡು ಸುಳ್ಳು ಪ್ರಕರಣವನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಚಾಸಾ-1, 3 ರಿಂದ 9 ರವರು ಸೇರಿಕೊಂಡು ನನ್ನನ್ನು ಬಳಸಿಕೊಂಡು ಸುಳ್ಳು ಹೇಳಿಕೆಯನ್ನು ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ. ಯಾರು ಯಾರಿಗೆ ಹಲ್ಲೆ ಮಾಡಿರುತ್ತಾರೆ ಮತ್ತು ಯಾರಿಗೆ ಯಾರು ಬೈದಿರುತ್ತಾರೆ ಎಂಬ ಬಗ್ಗೆ ನನಗೆ ಸ್ಪಷ್ಟತೆ ಇಲ್ಲಾ ಎಂದರೆ ಸರಿಯಲ್ಲ. 3 ನೇ ಆರೋಪಿ ನಿಂಧಿಸಿರುವ ಬಗ್ಗೆ ನನ್ನ ಕಲಂ 164 ರ ಹೇಳಿಕೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರ ವಿರುದ್ದ ಹೆಣ್ಣು ಮಕ್ಕಳ ಮೇಲೆ ಹಲ್ಲೆ ಮಾಡಿದ ಬಗ್ಗೆ ದೂರು ನೀಡಿದರೆ ಅವರನ್ನು ಜೈಲಿಗೆ ಕಳುಹಿಸಬಹುದೆಂಬ ದುರುದ್ದೇಶದಿಂದ ಚಾಸಾ-1, 3 ರಿಂದ 9 ರವರು ಸೇರಿ ಸುಳ್ಳು ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ : ಇಲ್ಲ</u>

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ ಎ ಒ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.